

‘ಚಿನ್ನ ಎಂದಿದ್ದರೂ ಕಷ್ಟಕಾಲಕ್ಕೆ ಕೂಡಿಡುವ ಆಪದ್ಧನ ಮಗಳೇ, ಗಟ್ಟಿಮುಟ್ಟಾದ ಕಚ್ಚಿನ ಬಳೆ ಅಳಿಸುವುದು ಬೇಡ, ಮಗಳ ಮದುವೆಗೆ ಮತ್ತೊಂದು ಜೊತೆ ಹೊಸ ಬಳೆಯನ್ನೇ ಖರೀದಿಸಿಬಿಡು, ಚಿನ್ನವೆಂದರೆ ಆಭರಣವಷ್ಟೇ ಅಲ್ಲ, ಅದು ನಿನ್ನೊಳಗಣ ವಿಶ್ವಾಸದ ಹೊನ್ನು’ ಎಂದು ಅಜ್ಜಿ, ಎರಡು ದಶಕಗಳ ಹಿಂದೆ ಅಮ್ಮನಿಗೆ ಹೇಳಿದ್ದ ಮಾತು ಮನದಲ್ಲಿ ಹಸುರಾಗಿದೆ.

ನಮ್ಮ ಹಿರೀಕರು ಕನಕವನ್ನು ಧನವಾಗಿ ಕಂಡವರು. ಮನೆಯಲ್ಲಿ ಬಂಗಾರದ ಒಡವೆಗಳಿದ್ದರೆ, ಸ್ವಾಭಿಮಾನದ ಬದುಕಿಗೆ ಧಕ್ಕೆಯಿಲ್ಲವೆಂದು ನಂಬಿದವರು. ಹೀಗಾಗಿ, ತಲೆಮಾರಿನಿಂದ ಬಂದ ಆಭರಣಗಳನ್ನು ಕೊರಳಿನಿಂದ ಕೊರಳಿಗೆ ದಾಟಿಸುತ್ತ ಜೋಪಾನವಾಗಿ ಇಟ್ಟುಕೊಂಡವರು.

ಮದುವೆ, ಉಪನಯನ, ಗೃಹಪ್ರವೇಶದಂತಹ ಕೌಟುಂಬಿಕ ಸಂಭ್ರಮ, ಹಬ್ಬ–ಹರಿದಿನಗಳ ವೇಳೆ ಮೇಲ್ಮನೆಯ ಮೂಲೆಯಲ್ಲಿ ಮರದ ಪೆಟ್ಟಿಗೆಯಲ್ಲಿ ಬೆಚ್ಚಗಿರುವ ಕಂಠಿಹಾರ, ಅವಲಕ್ಕಿ ಸರ, ಕೊತ್ತಂಬರಿ ಬೀಜದ ಸರ, ಪವನ್ ಸರ, ಸೌತೆ ಬೀಜದ ಬಳೆ (ಸೌತೆಕಾಯಿ ಬೀಜ ಹೋಲುವ ಕಚ್ಚಿನ ಬಳೆ), ಪಾಟಲಿ ಬಳೆ, ಜುಮುಕಿ ಮೊದಲಾದ ಚಿನ್ನದ ಒಡವೆಗಳು ಹೊರ ಪ್ರಪಂಚ ಕಾಣುತ್ತಿದ್ದವು. ನೆಂಟರಿಷ್ಟರು ಹೊರಟಿದ್ದೇ ಈ ಒಡವೆಗಳು ಹೆಂಗಸರ ಕೊರಳಿನಿಂದ ಕೆಳಗಿಳಿದು ಗಂಡಸರ ಕೈಸೇರಿ ಮತ್ತೆ ಪೆಟ್ಟಿಗೆಯೊಳಗೆ ಭದ್ರವಾಗುತ್ತಿದ್ದವು. ವಿಶೇಷ ಕಾರ್ಯಕ್ರಮಗಳಲ್ಲಿ ಪ್ರತಿಬಾರಿ ಇದೇ ಕ್ರಮದ ಪುನರಾವರ್ತನೆ. ಇನ್ನು ಕೆಲವರು ಮದುವೆ, ಶುಭ ಸಮಾರಂಭಗಳಿಗೆ ಹೋಗಲು ಆಚೀಚೆ ಮನೆಯಿಂದ ಒಡವೆ ಕಡ ತಂದು ಹಿಂದಿರುಗಿಸುವ ಕ್ರಮವೂ ಇತ್ತು.

ಒಡವೆಗಳ ಆಯ್ಕೆಯ ಹಳೆಯ ನೋಟ ಹೊಸ ಕಾಲದಲ್ಲಿ ಉಳಿದಿಲ್ಲ, ಆಪದ್ಧನದ ಪರಿಕಲ್ಪನೆಯಿಂದ ಅಲಂಕಾರದ ಆಕರ್ಷಣೆಯೆಡೆಗೆ ಹಳದಿ ಲೋಹದ ಹಾದಿ ಸಾಗಿದೆ. ದಿನದಿಂದ ದಿನಕ್ಕೆ ಚಿನ್ನದ ಬೆಲೆ ಗಗನಮುಖಿಯಾಗಿದೆ. ಆದರೆ, ಚಿನ್ನವೆಂಬ ಮೋಹಕ ಸಮ್ಮೋಹನದ ಸಂಕೋಲೆಯಿಂದ ಕಳಚಿಕೊಳ್ಳುವುದು ಹೆಣ್ಣುಮಕ್ಕಳಿಗೆ ತುಸು ಕಠಿಣವೇ. ಈ ಸಂದರ್ಭದಲ್ಲಿ, ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗದ ಯುವತಿಯರ ಮೈತುಂಬ ಒಡವೆ ತೊಡಬೇಕೆನ್ನುವ ಕನಸಿಗೆ ರೆಕ್ಕೆ ಕಟ್ಟಿದ್ದು ‘ಹಗುರ ಆಭರಣಗಳು’.

ಒಡವೆಗಳೆಂದರೆ ಘನವಾಗಿರಬೇಕು (ಹೆವಿ), ಇಂತಿಷ್ಟೇ ತೂಕವಿರಬೇಕು, ತೂಕವಿದ್ದ ಆಭರಣಕ್ಕಷ್ಟೇ ಕಿಮ್ಮತ್ತು ಎಂಬ ಮಾನದಂಡ ಇಟ್ಟುಕೊಂಡು ಬಂಗಾರ ಖರೀದಿಸುವ ಕಾಲ ಬದಲಾಗಿದೆ. ಒಡವೆಗಳ ವಿನ್ಯಾಸ, ಬಳಕೆ, ವೈವಿಧ್ಯತೆ ಜನಪ್ರಿಯವಾಗುತ್ತಿದೆ. ಸಪೂರ ಎಳೆಯ ಚೈನು, ಹವಳದ ಸರ ಮರೆಯಾಗಿ, ಅಗಲವಾದ ಭರ್ಜರಿ ವಿನ್ಯಾಸದ ನೆಕ್ಲೇಸ್, ಉದ್ದನೆಯ ಹಾರಗಳು ಮೆರೆಯುತ್ತಿವೆ.

ಚೋಳರ ಆಡಳಿತದ ಕಾಲದಲ್ಲಿಯೇ ಜನಪ್ರಿಯವಾಗಿದ್ದ ಕಡಿಮೆ ತೂಕದ ಹಗುರ ಆಭರಣಗಳು ಇತ್ತೀಚಿನ ವರ್ಷಗಳಲ್ಲಿ ಮತ್ತಷ್ಟು ಹೊಳಪುಗೊಂಡಿವೆ. ಅದ್ದೂರಿ ಸಮಾರಂಭಗಳಿಗೆ ಗ್ರ್ಯಾಂಡ್ ಆಗಿ ರೆಡಿಯಾಗುವ, ವಸ್ತ್ರ ವಿನ್ಯಾಸಕ್ಕೆ ಮ್ಯಾಚಿಂಗ್ ಒಡವೆ ಧರಿಸುವ ಟ್ರೆಂಡ್ ಮೊಳೆತ ಮೇಲೆ ಹಗುರ ಆಭರಣಗಳ ಆಯ್ಕೆಯ ಅವಕಾಶ ಹೇರಳವಾಗಿದೆ.

ಸದ್ಯ ಕಡಿಮೆ ತೂಕದ ಆಭರಣಗಳಲ್ಲಿ ಯುವತಿಯರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವುದು ‘ಟೆಂಪಲ್ ಜ್ಯುವೆಲ್ಲರಿ’ ಮತ್ತು ಆ್ಯಂಟಿಕ್ ಆಭರಣಗಳು. ಕಲಾತ್ಮಕತೆಯೇ ಇವುಗಳ ಸೊಬಗು. ಕುಸುರಿ ಕೆತ್ತನೆಯ ಟೆಂಪಲ್ ಜ್ಯುವೆಲ್ಲರಿ ಆಧುನಿಕ ಉಡುಪುಗಳಿಗೆ ಸಾಂಪ್ರದಾಯಿಕ, ದೈವಿಕ ಸ್ಪರ್ಶ ನೀಡಬಲ್ಲ ಮನಮೋಹಕ ಒಡವೆ. ಟೆಂಪಲ್ ಜ್ಯುವೆಲ್ಲರಿಗಳು ಕೆಂಪು ಛಾಯೆಯಲ್ಲಿ ಮಿನುಗುತ್ತವೆ.



ಕಪ್ಪು ಛಾಯೆ ಆ್ಯಂಟಿಕ್ ಒಡವೆ

## ಸಮುದಾಯಕ್ಕೆ ತಕ್ಕ ಚಿನ್ನದ ವಿನ್ಯಾಸ

ಕರಾವಳಿಯಲ್ಲಿ ಜನಪ್ರಿಯವಾಗಿರುವ ಆಭರಣಗಳೂ ಈಗ ಹೆಚ್ಚು ಚಿನ್ನದ ಅಗತ್ಯವಿಲ್ಲದೆ ಹಗುರವಾಗಿ ರೂಪುಗೊಳ್ಳುತ್ತಿವೆ. ಉದಾಹರಣೆಗೆ, ಮಲ್ಲಿಗೆ ಮೊಗ್ಗು ಸರ, ಕುಕ್ಕುಮುಡಿ ಸರ (ಮಾವಿನಮಿಡಿ ಸರ), ಪವನ್ ಸರ, ಮಿಸ್ರಿಮಾಲೆ, ನವರತ್ನಹಾರ, ಕಜಿಪುಕಾಯಿ ಸರ ಮುಂತಾದವು ಭಾರೀ ಚಿನ್ನದ ಬಳಕೆಯೊಂದಿಗೆ ಹಿಂದೆಲ್ಲ ರೂಪುಗೊಳ್ಳುತ್ತಿದ್ದವು. ಆದರೆ ಇತ್ತೀಚೆಗೆ ಹಗುರವಾಗಿ ಎರಡರಿಂದ ಮೂರು ಪವನ್ ಚಿನ್ನದಲ್ಲಿ ಇವುಗಳನ್ನು ರೂಪಿಸಲಾಗುತ್ತಿದೆ. ನೋಟಕ್ಕೆ ಚಂದ. ಧರಿಸಲು ಹಗುರ ಎನ್ನುವುದು ಯುವಜನತೆಯ ಟ್ರೆಂಡ್. ಗೆಜ್ಜೆಟಿಕಿ, ಗುಂಡುಸರ, ಅಡ್ಡಿಗೆ ಚೈನು, ಮೋಹನಮಾಲೆ, ಅಷ್ಟಲಕ್ಷ್ಮಿ ಮಾಲೆಗಳು ಮದುವೆಯಲ್ಲಿ ಧರಿಸಲು, ಮದುವಣಗಿತ್ತಿ ಧರಿಸಲು ಒಪ್ಪವಂತಹ ಆಭರಣಗಳು.

ಕಾಸರಗೋಡು, ದಕ್ಷಿಣಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಸಾಂಪ್ರದಾಯಿಕ ಆಭರಣಗಳತ್ತ ಹೆಚ್ಚಿನ ಒಲವು ಇರುವುದರಿಂದ ಹಳೆ ಶೈಲಿಯ ಆಭರಣಗಳನ್ನೂ ಹಗುರವಾಗಿ ತಯಾರಿಸಲು ಅಕ್ಕಸಾಲಿಗರು ಸಜ್ಜಾಗಿದ್ದಾರೆ. ಸೊಂಟದ ಪಟ್ಟಿಗೆ ಸಿಕ್ಕಿಸುವ ಬೀಗದ ಕೈಯಗೊಂಚಲು ಮತ್ತೊಂದು ದೌಲತ್ತಿನ ಸಂಕೇತವಿದ್ದಂತೆ. ಹಿಂದೆಲ್ಲ ಬೆಳ್ಳಿಯ ಗೊಂಚಲು ಇದ್ದರೆ ಈಗ ಚಿನ್ನದ ಗೊಂಚಲನ್ನೂ ತಯಾರಿಸುವ ರೂಢಿ ಬಂದಿದೆ. ಇನ್ನು ಈ ಮೂರು ಜಿಲ್ಲೆಗಳಲ್ಲಿ ಸಮುದಾಯಕ್ಕೆ ಅನುಗುಣವಾಗಿ ಚಿನ್ನದ ವಿನ್ಯಾಸವೂ ಬದಲಾಗುತ್ತದೆ. ಉದಾಹರಣೆಗೆ ಜಿಎಸ್‌ಬಿ ಸಮುದಾಯ ಮತ್ತು ವಿಶ್ವಕರ್ಮ ಸಮುದಾಯದ ಮಹಿಳೆಯರಿಗೆ ಹವಳದ ಸರ ಬಹಳ ಮಹತ್ವದ್ದಾಗಿರುತ್ತದೆ. ಮಧ್ವ ಬ್ರಾಹ್ಮಣರ ಆಭರಣ, ಬಂಟ ಮಹಿಳೆಯರ ಆಭರಣಗಳು, ಬ್ಯಾರಿ ಸಮುದಾಯದವರ ಆಭರಣಗಳ ಪ್ರತ್ಯೇಕ ಶೈಲಿ–ವಿನ್ಯಾಸಗಳನ್ನು ಕರಾವಳಿಯಲ್ಲಿ ಕಾಣಬಹುದು.